**ಸಂದರ್ಶನ: ಉಷಾ ನರಸಿಂಹನ್**

## ವಸುಮತಿ ಉಡುಪ ಅವರೊಂದಿಗೆ ಮಾತುಕತೆ

# "ಸಮಾಜಕ್ಕೆ ಕನ್ನಡಿ ಹಿಡಿಯುವ ಕೆಲಸ ನನ್ನದು

ಚಿತ್ರಗಳು: ಇರ್ಷಾದ್ ಮಹಮ್ಮದ್

ತಂದೆ ರಂಗಾಭಟ್ಟರು, ತಾಯಿ ತ್ರಿಪುರಾಂಬ. ಕಿರಣಕೆರೆಯಲ್ಲಿ ಬಾಲ್ಯ ಕಳೆದು ಪ್ರಾಥಮಿಕ ಶಾಲಾ ದಿನಗಳಿಂದಲೇ ತೀರ್ಥಹಳ್ಳಿಯಲ್ಲಿ ತಂದೆಯ ಚಿಕ್ಕಪ್ಪನ ಮನೆಯಲ್ಲಿ ವಾಸ. ತನ್ನ ಸೋದರ ಸೋದರಿಯರೊಡನೆ ದೊಡ್ಡಪ್ಪನ ಮಕ್ಕಳು, ವಾರಾನ್ನಕ್ಕೆ ಬರುತ್ತಿದ್ದವರ ಜೊತೆಯಲ್ಲಿ ತುಂಬಿದ ಮನೆಯ ಸಂಸ್ಕೃತಿ ಸಂಪನ್ನ ವಾತಾವರಣದಲ್ಲಿ ಅವರು ಬೆಳೆದದ್ದು. ಐದನೇ ವಯಸ್ಸಿನಲ್ಲಿ ನೇರವಾಗಿ ಮೂರನೇ ತರಗತಿಗೆ ಸೇರಿಕೊಳ್ಳಲು ಮುಖ್ಯೋಧ್ಯಾಪಕಿಯಿಂದ ಶಿಫಾರಸು ಪಡೆದ ಪ್ರತಿಭಾವಂತ ವಿದ್ಯಾರ್ಥಿನಿ. ಮಕ್ಕಳಿಲ್ಲದ ಚಿಕ್ಕಜ್ಜ, ಅಜ್ಜಿಯ ಮುದ್ದಿನಲ್ಲಿ ಸಂತಸದ ಸಮೃದ್ಧ ಬಾಲ್ಯ ಕೌಮಾರ್ಯಗಳನ್ನು ಕಳೆಯುವ ಯೋಗ. ರಜೆಯಲ್ಲಿ ತನ್ನ ತಂದೆತಾಯಿಯರ ಊರಾದ ಕಿರಣಕೆರೆಗೆ ದೌಡು. ಅಲ್ಲಿಯ ಖುಷಿಖುಷಿಯ ಬಾಲ್ಯ ಕಾಲದ ನೆನಪುಗಳಲ್ಲಿ ಮುಖ್ಯವಾದದ್ದು ಅಡಿಕೆ ಕುಯಿಲಿನ ಕಾಲದ್ದು. ಆಳು ಮಕ್ಕಳೊಡನೆ ತಾನೂ ಒಂದು ಮೆಟ್ಟುಗತ್ತಿ ಹಿಡಿದು ಅಡಿಕೆ ಸುಲಿಯುತ್ತಾ, ಆ ದೀರ್ಘ ಮಲೆನಾಡ ಕುಳಿರಿರುಳುಗಳಲ್ಲಿ ಅಲ್ಲಿ ನಡೆಯುತ್ತಿದ್ದ ಮಾತು, ಕತೆ, ಹಾಡು, ಒಗಟು... ಎಲ್ಲಕ್ಕೂ ಕಣ್ಣಾಗಿ, ಕಿವಿಯಾಗಿ ಕಲ್ಪನೆಯ ಕ್ಷಿತಿಜಗಳನ್ನು ವಿಸ್ತರಿಸಿಕೊಳ್ಳುತ್ತಾ